# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 119(1049)**

**ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ : 23.02.2024**

**ಉತ್ತರಿಸುವ ಸಚಿವರು : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಹುಕೋಟಿ ರೂಪಾಯಿ ವೆಚ್ಚದಲ್ಲಿ ರವೀಂದ್ರ ಕಲಾಕ್ಷೇತ್ರವನ್ನು ನವೀಕರಣ ಮಾಡುವುದಕ್ಕೆ ಸರ್ಕಾರ ಮುಂದಾಗಿರುವುದು ನಿಜವೇ; | ಹೌದು.<br>ಆಧುನೀಕರಣಕ್ಕೆ ಅನುಗುಣವಾಗಿ ರವೀಂದ್ರ ಕಲಾಕ್ಷೇತ್ರವನ್ನು ನವೀಕರಣ ಮಾಡಲು ಉದ್ದೇಶಿಸಲಾಗಿತ್ತು. |
| ಆ) | ಹಾಗಿದ್ದಲ್ಲ, ಎಷ್ಟು ಕೋಟಿ ರೂಪಾಯಿಗಳ ಅಂದಾಜು ಪಟ್ಟಿ ಸಿದ್ಧಪಡಿಸಲಾಗಿದೆ ಹಾಗೂ ನವೀಕರಣದ ಅವಶ್ಯಕತೆ ಇದೆಯೇ; | ಆದರೆ, ದಿನಾಂಕ:08.02.2024 ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ರಂಗಕರ್ಮಿಗಳೊಂದಿಗೆ ಚರ್ಚಿಸಲಾಗಿ, ನವೀಕರಣದ ಪ್ರಸ್ತಾವನೆಯನ್ನು ಸಧ್ಯಕ್ಕೆ ಕೈಬಿಡಲಾಗಿದೆ. |
| ಇ) | ಕಳೆದ 5 ವರ್ಷದ ಅವಧಿಯಲ್ಲಿ ರವೀಂದ್ರ ಕಲಾಕ್ಷೇತ್ರದಿಂದ ಇಲ್ಲಿಯವರೆಗೂ ನವೀಕರಣಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ; | ಕಳೆದ 5 ವರ್ಷದ ಅವಧಿಯಲ್ಲಿ ರವೀಂದ್ರ ಕಲಾಕ್ಷೇತ್ರದಿಂದ ಇಲ್ಲಿಯವರೆಗೂ ನವೀಕರಣಕ್ಕಾಗಿ |

| ಕ್ರ. ಸಂ | ವರ್ಷವಾರು | ನವೀಕರಣ ಕ್ಕಾಗಿ ವೆಚ್ಚ ಮಾಡಲಾದ ಅನುದಾನ ರೂ.ಗಳಲ್ಲಿ | ಷರಾ |
|---|---|---|---|
| 1. | 2018-2019 | - | |
| 2. | 2019-2020 | - | |
| 3. | 2020-2021 | - | |
| 4. | 2021-2022 | 1,29,66,700/- | ಕಾಮಗಾರಿ ಪೂರ್ಣಗೊಂಡಿದೆ |
| 5. | 2022-2023 | 1,49,64,300/- | ಕಾಮಗಾರಿ ಕೈಗೊಳ್ಳಲು ಲೋಕೋಪಯೋಗಿ ಇಲಾಖೆಗೆ ಅನುದಾನವನ್ನು ಜಮ ಮಾಡಲಾಗಿದೆ. |
| **ಒಟ್ಟು** | | **2,79,31,000/-** | |

..2...

| | | |
|---|---|---|
| ಈ) | ಕಳೆದ 5 ವರ್ಷಗಳ ಹಿಂದೆ ಸುಮಾರು 2.24 ಕೋಟಿ ರೂ. ವೆಚ್ಚ ಮಾಡಿ ಕಲಾಕ್ಷೇತ್ರದಲ್ಲಿ ಹೊಸ ಧ್ವನಿ ಮತ್ತು ಬೆಳಕಿನ ವ್ಯವಸ್ಥೆಯನ್ನು ಮಾಡಿರುವುದು ನಿಜವೇ; ಹಾಗಿದ್ದಲ್ಲ, ಪದೇ ಪದೇ ಅದೇ ಕೆಲಸಕ್ಕೆ ನವೀಕರಣದ ಹೆಸರು ನೀಡುತ್ತಿರುವುದು ಸರಿಯಾದ ಕ್ರಮವೇನು? (ಪೂರ್ಣ ವಿವರಗಳನ್ನು ಒದಗಿಸುವುದು) | ರವೀಂದ್ರ ಕಲಾ ಕ್ಷೇತ್ರದ ಧ್ವನಿ ಮತ್ತು ಬೆಳಕು ವ್ಯವಸ್ಥೆಯ ನವೀಕರಣವನ್ನು 1987-88ರಲ್ಲಿ ಅನಂತರ 2005-06ರಲ್ಲಿ ನವೀಕರಣ ಗೊಳಿಸಲಾಗಿದ್ದು, ಸುಮಾರು 11 ವರ್ಷಗಳ ನಂತರ 2017-18ನೇ ಸಾಲಿನಲ್ಲಿ ಧ್ವನಿ ಬೆಳಕು ವ್ಯವಸ್ಥೆಯನ್ನು ನವೀಕರಣಗೊಳಿಸಲಾಗಿದೆ.<br><br>ಅದರಂತೆ, 2017-18ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಸಂವಾ:335 ಕಸಧ 2015. ದಿನಾಂಕ:26-04-2017ರ ಆದೇಶದಂತೆ ರವೀಂದ್ರ ಕಲಾಕ್ಷೇತ್ರದ ಧ್ವನಿ ಮತ್ತು ಬೆಳಕು ಕಾಮಗಾರಿಗೆ ಅಂದಾಜು ವೆಚ್ಚ2.00 ಕೋಟಿಯಲ್ಲಿ ಕಾಮಗಾರಿ ಮಾಡಲಾಗಿದೆ. ಸರ್ಕಾರ ಆದೇಶವನ್ನು ಲಗತ್ತಿಸಿದೆ.<br><br>ರವೀಂದ್ರ ಕಲಾಕ್ಷೇತ್ರದಲ್ಲಿ ಕೇಂದ್ರ / ರಾಜ್ಯ ಸರ್ಕಾರದ ಕಾರ್ಯಕ್ರಮಗಳಾದ, ರಾಷ್ಟ್ರೀಯ ಹಬ್ಬಗಳು, ನಾಡಹಬ್ಬಗಳು, ಜಯಂತಿಗಳು, ಕರ್ನಾಟಕ ರಾಜ್ಯೋತ್ಸವ, ಸರ್ಕಾರ ಸೂಚಿಸುವ ಕಾರ್ಯಕ್ರಮಗಳು, ಅಕಾಡೆಮಿ ಕಾರ್ಯಕ್ರಮಗಳು, ಭರತನಾಟ್ಯಂ, ಕನ್ನಡ ನಾಟಕ, ಸಂಗೀತ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಜಾನಪದ ಸಂಗೀತ, ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ಯಕ್ಷಗಾನ, ಸಾಹಿತ್ಯ ಗೋಷ್ಠಿ, ಪ್ರಶಸ್ತಿ ಪ್ರದಾನ ಸಮಾರಂಭ, ಸಾಂಸ್ಕೃತಿಕ ಕಾರ್ಯಕ್ರಮ ಪುಸ್ತಕ ಬಿಡುಗಡೆ ಹೀಗೆ ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ.<br><br>ಈ ಹಿಂದೆ ಧ್ವನಿ ಮತ್ತು ಬೆಳಕಿನ ವ್ಯವಸ್ಥೆಯನ್ನು ದುರಸ್ತಿಗೊಳಿಸಿ 6 ವರ್ಷಗಳಾಗಿದೆ. ನಿರಂತರವಾಗಿ ಉಪಯೋಗಿಸಿರುವುದರಿಂದ ಆಗಾಗ್ಗೆ ತಾಂತ್ರಿಕ ದೋಷಗಳು ಕಂಡುಬರುವುದರಿಂದ ಅವುಗಳನ್ನು ಸರಿಪಡಿಸಲು ಆಗಿಂದಾಗೆ ಕ್ರಮವಹಿಸಲಾಗುತ್ತಿದೆ. ಸದ್ಯ ನವೀಕರಣ ಕೈಗೊಳ್ಳುವ ಉದ್ದೇಶ ಇರುವುದಿಲ್ಲ. |

**ಸಂಖ್ಯೆ: ಕಸಂವಾ 24 ಕವಿಸ 2024**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.